18	ಕಾರವಾರ	581356.00	20000.00	467554.00	270000.00
19	ಬಿಜಾಪುರ	686549.00	–	803246.00	170000.00
20	ಹಾವೇರಿ	196421.00	30000.00	494280.00	220000.00
21	ಗದಗ	–	–	116839.00	130000.00
22	ಬಾಗಲಕೋಟೆ	–	30000.00	–	170000.00
23	ಗುಲ್ಬರ್ಗಾ	1335403.00	–	962002.00	810000.00
24	ಬಳ್ಳಾರಿ	1319550.00	–	1266352.00	170000.00
25	ಬೀದರ್	392614.00	20000.00	309833.00	270000.00
26	ರಾಯಚೂರು	321074.00	–	491527.00	90000.00
27	ಕೊಪ್ಪಳ	337758.00	20000.00	270270.00	110000.00
	ಒಟ್ಟು;	39982664.00	340000.00	46481006.00	4999000.00

3112 (3748) : ಶ್ರೀ ಅಲ್ಲೋಡ್ ಹನುಮಂತಪ್ಪ ವೈ. (ದೇವದುರ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ಯಾವ ಯಾವ ಯೋಜನೆ ಮತ್ತು ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಮಂಜೂರಾದ ವಿವಿಧ ಕಾಮಗಾರಿಗಳು ಯಾವುವು; ಕಾಮಗಾರಿಗಳಿಗೆ ಮಂಜೂರಾದ, ಖರ್ಚಾದ ಹಣ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಆ) ದೇವದುರ್ಗ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಯೋಜನೆ ಮತ್ತು ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು; (ಗ್ರಾಮವಾರು ವಿವರ ನೀಡುವುದು);

ಇ) ತಾಲ್ಲೂಕಿನಲ್ಲಿ ತೆಗೆದುಕೊಂಡ ಕಾಮಗಾರಿಗಳು ಪೂರ್ಣಗೊಂಡಿವೆಯೇ; ಇಲ್ಲದಿದ್ದಲ್ಲಿ, ಕಾರಣವೇನು; (ವಿವರ ನೀಡುವುದು);

ಈ) ಹಾಗಿದ್ದಲ್ಲಿ, ಪೂರ್ಣಗೊಂಡ ಮತ್ತು ಅಪೂರ್ಣಗೊಂಡ ಕಾಮಗಾರಿಗಳಾವುವು; (ಗ್ರಾಮವಾರು ವಿವರ ನೀಡುವುದು);

ಉ) ಕಾಮಗಾರಿಗಳಲ್ಲಿ ಭಾರಿ ಭ್ರಷ್ಟಾಚಾರ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ತೆಗೆದುಕೊಂಡ ಕ್ರಮಗಳಾವುವು?

ಡಾ: ಎಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) –

ಅ) ರಾಯಚೂರು ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆ ಮತ್ತು ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳು, ಮಂಜೂರಾದ ಹಾಗೂ ಖರ್ಚಾದ ತಾಲ್ಲೂಕುವಾರು ಹಣದ ವಿವರವನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಆ) ದೇವದುರ್ಗ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆ ಮತ್ತು ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಗ್ರಾಮವಾರು ವಿವರಗಳನ್ನು ಅನುಬಂಧ–1, 2 ಮತ್ತು 3ರಲ್ಲಿ ಒದಗಿಸಲಾಗಿದೆ.

ಇ) ವಿವರಗಳನ್ನು ಅನುಬಂಧ–1, 2 ಮತ್ತು 3ರಲ್ಲಿ ಒದಗಿಸಲಾಗಿದೆ.

ಈ) ವಿವರಗಳನ್ನು ಅನುಬಂಧ–1, 2 ಮತ್ತು 3ರಲ್ಲಿ ಒದಗಿಸಲಾಗಿದೆ.

ಉ) ದೇವದುರ್ಗ ತಾಲ್ಲೂಕಿನಲ್ಲಿ ಪಲಕನಮರಡಿ ಹಾಗೂ

2) ಕಿರಿಯ ಇಂಜಿನಿಯರ್, ಜಿ.ಪಂ.ಇ. ಉಪವಿಭಾಗ, ದೇವದುರ್ಗ ಇವರ ವಿರುದ್ಧ ಹಣ ದುರುಪಯೋಗಪಡಿಸಿಕೊಂಡ ಬಗ್ಗೆ ಇಲಾಖಾ ವಿಚಾರಣೆ ನಡೆಯುತ್ತಿದೆ.

1905 (2210) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕೃಷಿ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ರೈತರಿಗೆ ಯಾವ ಯಾವ ಸಾಲಿನ ಬೆಳೆ ವಿಮೆ ಬಿಡುಗಡೆ ಮಾಡಲು ಬಾಕಿ ಇದೆ; (ವರ್ಷವಾರು ವಿವರ ಒದಗಿಸುವುದು);

ಆ) ಎಷ್ಟು ಸಮಯದಿಂದ ಬಾಕಿ ಇದೆ ಮತ್ತು ಎಷ್ಟು ಹಣ ಯಾವ ಯಾವ ಜಿಲ್ಲೆಯ ರೈತರಿಗೆ ನೀಡಲು ಬಾಕಿ ಇದೆ ; (ಪ್ರತ್ಯೇಕವಾಗಿ ವಿವರ ನೀಡುವುದು)

ಇ) ಬೆಳೆ ವಿಮೆ ಹಣ ಬಿಡುಗಡೆಯಾಗುವಾಗ ತಾರತಮ್ಯವಾಗಿರುವುದು ಹಾಗೂ ಬೆಳೆ ನಾಶದ ಸಮಯದಲ್ಲಿನ ಸಮೀಕ್ಷೆಯಲ್ಲಿ ಲೋಪದೋಷವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು):